ಇಂದು ದಿಃ **07-11-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಬಿ.ಎಚ್ ವಕೀಲರಿಂದ 1 ಮತ್ತು 3 ರಿಂದ 5 ನೇ ಪ್ರತಿವಾದಿಗಳ ಪರಃ**

ನಮ್ಮ ತಂದೆಯ ಹೆಸರು ಪಟೀಲ್ ಕರಿಬಸಪ್ಪ ಮತ್ತು ತಾಯಿಯ ಹೆಸರು ಬಸಬಸವಣ್ಣಮ್ಮ ಎಂದರೆ ಸರಿಯ . ನನ್ನ ಅಜ್ಜ ನ ಹೆಸರು ಮಲ್ಲಪ್ಪ ಎಂದರೆ ಸರಿ. ನನ್ನ ತಂದೆ ತಾಯಿಗೆ ಒಂದು , ಎರಡನೇ ಪ್ರತಿವಾದಿಯರು ಮತ್ತು 6 ನೇ ಪ್ರತಿವಾದಿ ಮತ್ತು ಮೃತ ಪ್ರಭುದೇವ ಗಂಡು ಮಕ್ಕಳು. ನಾನು ಮತ್ತು 2 ನೇ ವಾದಿ ಹೆಣ್ಣು ಮಕ್ಕಳು ಇರುತ್ತೇವೆ. 3 ನೇ ಪ್ರತಿವಾದಿ ಪ್ರಭುದೇವ ಈತನ ಹೆಂಡತಿ ಮತ್ತು 4 ಮತ್ತು 5 ನೇ ಪ್ರತಿವಾದಿಯರು ಅವರ ಮಕ್ಕಳು ಎಂದರೆ ಸರಿ . 6 ನೇ ಪ್ರತಿವಾದಿ ಬೆಂಗಳೂರಿನಲ್ಲಿ ಉಪನ್ಯಾಸಕರು ಎಂದು ಇದ್ದರು . ಅವರು ನಿವೃತ್ತಿಯ ನಂತರ ಅಲ್ಲೇ ವಾಸವಿದ್ದಾರೆ ಎಂದರೆ ಸರಿ . ನನ್ನ ಗಂಡ ಶಿಕ್ಷಕ ಎಂದು ಇದ್ದರು. ನನ್ನ ಗಂಡ 2001 ರಲ್ಲಿ ತೀರಿಕೊಂಡಿರುತ್ತಾರೆ. ನನಗೆ ಇಬ್ಬರು ಮಕ್ಕಳು ಇರುತ್ತಾರೆ. ನನ್ನ ಮಗ ವೈದ್ಯ ಇರುತ್ತಾನೆ ಮಗಳ ಮದುವೆ ಆಗಿದೆ. 2 ನೇ ವಾದಿಯ ಗಂಡ ಗ್ರಾಮೀಣ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದರು ಈ ನಿವೃತ್ತಿ ಹೊಂದಿರುತ್ತಾರೆ. ನನ್ನ ಮದುವೆ 1985 ರಲ್ಲಿ ಆಗಿರುತ್ತದೆ. 2 ನೇ ವಾದಿಯ ಲಗ್ನ 1988 ರಲ್ಲಿ ಆಗಿರುತ್ತದೆ. 2 ನೇ ಪ್ರತಿವಾದಿ ವೈದ್ಯ ಎಂದು ಇದ್ದರು ಎಂದರೆ ಸರಿ. ಸುಮಾರು 8 ವರ್ಷಗಳ ಹಿಂದೆ ಅವರು ನಿವೃತ್ತಿ ಹೊಂದಿರುತ್ತಾರೆ. 2 ನೇ ಪ್ರತಿವಾದಿ ಜಿ ಎಂ ಐ ಟಿ ವಸತಿ ಗೃಹ ಚಿತ್ರದುರ್ಗದಲ್ಲಿ ವಾಸ ಇರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಾವು ವಾಸ ಇದ್ದೇವು ಎಂದು ಹೇಳುತ್ತಾರೆ. 2 ನೇ ಪ್ರತಿವಾದಿ ನಿವೃತ್ತಿ ಹೊಂದಿದ ನಂತರ ಕೆಲವು ದಿನ ಜಿ ಎಂ ಐ ಟಿ ಚಿತ್ರದುರ್ಗದಲ್ಲಿ ವಾಸವಿದ್ದರು. ಈಗ ದಾವಣಗೆರೆ ಯಲ್ಲಿ ವಾಸವಿದ್ದಾರೆ. 1988 ರಿಂದ ದಾವಣಗೆರೆಯಲ್ಲಿ

ವಾಸವಿದ್ದಾರೆ. ನಾನು ಈಗ ಸುಮಾರು ಒಂದು ವರ್ಷಗಳಿಂದ ದಾವಣಗೆರೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ , ನನ್ನ ಮಗ ಎಸ್ ಎಸ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾನೆ . ಚಿತ್ರದುರ್ಗದ ಜಿ ಎಂ ಐ ಟಿ ಯಲ್ಲಿ ಒಂದು ವರ್ಷ ವಾಸವಿದ್ದೇವು. ವಕೀಲರಿಗೆ ನನ್ನ ಮತ್ತು 2 ನೇ ಪ್ರತಿವಾದಿಯ ವಿಳಾಸವನ್ನು ನಾನೇ ಕೊಟ್ಟಿದ್ದೇನೆ ಎಂದರೆ ಸರಿ ಸಾಕ್ಷಿ ಆಗ ಚಿತ್ರದುರ್ಗದಲ್ಲಿ ವಾಸವಿದ್ದೇನೆಂದು ಹೇಳುತ್ತಾರೆ. ದಾವೆ ಹಾಕುವ ಸಮಯದಲ್ಲಿ 2 ನೇ ಪ್ರತಿವಾದಿಯ ವಿಳಾಸವನ್ನೂ ಸಹ ಚಿತ್ರದುರ್ಗವನ್ನು ತೋರಿಸಿದ್ದೇನೆಂದರೆ ಸರಿ . ನಾವಿಬ್ಬರೂ ಆಗ ಒಂದೇ ಮನೆಯಲ್ಲಿದ್ದೆವು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಹೆಂಡತಿಯ ಹೆಸರು ಜ್ಯೋತಿ ಎಂದು ಇರುತ್ತದೆ. ಸಾಕ್ಷಿಗೆ ನಿಪಿ 12 ನ್ನು ತೋರಿಸಿ ಸದರಿ ದಾಖಲೆಯನ್ನು 2 ನೆ ಪ್ರತಿವಾದಿಯ ಹೆಂಡತಿ ಜ್ಯೋತಿ ತೆಗೆಸಿದ್ದಾರೆಂದು ಸರಿ . ನಾನು ಈ ದಾವೆಯಲ್ಲಿ ಹಾಜರು ಪಡಿಸಿದ ದಾಖಲೆಗಳನ್ನು 2 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ತೆಗೆಸಿಕೊಟ್ಟಿದ್ದಾರೆ ಎಂದರೆ ಸರಿ , ಸಾಕ್ಷಿ ಕೆಲವೊಂದು ದಾಖಲೆಗಳನ್ನು ನಾನು ತೆಗೆಸಿದ್ದೇನೆಂದು ಹೇಳುತ್ತಾರೆ. ಆಗ ನನ್ನ ಜೊತೆಗೆ ಅವರೂ ಬಂದಿದ್ದರು ಎಂದು ಹೇಳುತ್ತಾರೆ. ನಾನು ಬಿ ಎ ವರೆಗೆ ಓದಿದ್ದೇನೆ.

ಮುಂದಿನ ಪಾಟೀ ಸವಾಲಿಗೆ ಸಮಯ ಕೇಳಿದ್ದು ನೀಡಲಾಯಿತು.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.